# ಜನ ಸೇವಕ

ಅಭಿವೃದ್ಧಿಯ ಪರ್ವ

ಸಂಪುಟ 01, ಸಂಚಿಕೆ 08, ಆಗಸ್ಟ್ 2022, ಯಲ್ಲಾಪುರ

## ಕ್ಷೇತ್ರದಾದ್ಯಂತ ಬಾಂದಾರು/ಕಿಂಡಿ ಆಣೆಕಟ್ಟು ಸಹಿತ ಸೇತುವೆ ನಿರ್ಮಾಣಕ್ಕೆ 46.85 ಕೋಟಿ ಅನುದಾನ ಮಂಜೂರು



ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳ ಮಾಹಿತಿಯನ್ನು ಹೊಂದಿರುವ ಡಿಜಿಟಲ್ ಸಂಚಿಕೆ



ಮಳೆ ಹಾನಿಗೆ ಸಂಬಂಧಿಸಿದಂತೆ ಹಾವೇರಿ ಜಿಲ್ಲಾಧಿಕಾರಿ ಕಾರ್ಯಾಲಯದಲ್ಲಿ ಜಿಲ್ಲಾ ಮಟ್ಟದ ಅಧಿಕಾರಗಳ ಸಭೆ ನಡೆಸಿದರು.



ಕಾರ್ಮಿಕ ಅದಾಲತ್ 2.0 ಅಭಿಯಾನದ ಜನಜಾಗೃತಿ ಪ್ರಚಾರ ವಾಹನಕ್ಕೆ ಚಾಲನೆ ನೀಡಿದರು.



ಹಾವೇರಿ ಜಿಲ್ಲೆಯ ಹಿರೇಕೆರೂರ ತಾಲೂಕಿನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು.



ತಾಲೂಕಾ ಯುವ ಮೋರ್ಚಾ ಘಟಕದ ವತಿಯಿಂದ ಆಯೋಜಿಸಿದ್ದ ವನ ಮಹೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.



ಯಲ್ಲಾಪುರ ಪಟ್ಟಣದ ತಾಲೂಕಾ ಕ್ರೀಡಾಂಗಣದ ಅಭಿವೃದ್ಧಿಯ ಕುರಿತಂತೆ ಮೈದಾನದಲ್ಲಿ ಹಿರಿಯ ಕ್ರೀಡಾಪಟುಗಳ ಜೊತೆಯಲ್ಲಿ ಸಭೆ ನಡೆಸಿದರು.



ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ ಅವರೊಂದಿಗೆ ಸಿದ್ದ ಉಡುಪು ತಯಾರಿಕಾ ಘಟಕಕ್ಕೆ ಭೂಮಿ ಪೂಜೆಯನ್ನು ನೆರವೇರಿಸಿದರು.

" ಪ್ರಯತ್ನಿಸುವುದು ಮನುಷ್ಯನ ಕರ್ತವ್ಯವಾಗಿದೆ, ಯಶಸ್ಸು, ಅವಕಾಶ ಹಾಗೂ ಪರಿಸರದ ಮೇಲೆ ನಿರ್ಧಾರವಾಗುತ್ತದೆ "

- ಭಗತ್ ಸಿಂಗ್



ಸಂಪುಟ 01, ಸಂಚಿಕೆ 08, ಆಗಸ್ಟ್ 2022, ಯಲ್ಲಾಪುರ

# ಮುಖ ಬಿಂಬ

» ಕ್ಷೇತ್ರದಾದ್ಯಂತ ಬಾಂದಾರು/ಕಿಂಡಿ ಆಣೆಕಟ್ಟು ಸಹಿತ ಸೇತುವೆ ನಿರ್ಮಾಣಕ್ಕೆ 46.85 ಕೋಟಿ ಅನುದಾನ ಮಂಜೂರು 4

» ಹೆರಿಗೆ ಸೌಲಭ್ಯ ಸಹಾಯಧನ ರೂ. 50 ಸಾವಿರಕ್ಕೆ ಏರಿಕೆ ಕಟ್ಟಡ ಕಾರ್ಮಿಕರಿಗೆ ಕೊಡುಗೆ 6

» ಶ್ರಮಿಕರ ಶ್ರೇಯೋಭಿವೃದ್ಧಿಗೆ ಕಾರ್ಮಿಕ ಇಲಾಖೆಯ ಪಣ 7

» ಸರಕಾರಿ ಸೌಲಭ್ಯ
- ಪ್ರಧಾನ ಮಂತ್ರಿ ಮುದ್ರಾ ಯೋಜನೆ 9

» ನಮ್ಮೂರ ಸಾಧಕರು
- ಹಿರಿಯ ಸ್ವಾತಂತ್ರ್ಯ ಹೋರಾಟಗಾರ್ತಿ ಅೀಲಾಬಾಯಿಫಕ್ಕೀರಪ್ಪ ಇಂಗಳಗಿ. 13

» ಡಾಕ್ಟರ್ ಪ್ಲಸ್
- ಧನಾತ್ಮಕ ಚಿಂತನೆಯಿಂದ ಆರೋಗ್ಯ 14

» ನಮ್ಮೂರ ಪ್ರವಾಸಿತಾಣ
- ಜೇನುಕಲ್ಲು ಗುಡ್ಡ 16

» ಪತ್ರಿಕೆಯಲ್ಲಿ ಕಂಡಂತೆ 17



# ಸಚಿವ ಶಿವರಾಮ ಹೆಬ್ಬಾರ್ ಪ್ರಯತ್ನದ ಫಲವಾಗಿ 46.85 ಕೋಟಿ ವೆಚ್ಚದಲ್ಲಿ ಯಲ್ಲಾಪುರ ಕ್ಷೇತ್ರಕ್ಕೆ ಸೇತುವೆ ಸಹಿತ 21 ಕಿಂಡಿ ಅಣೆಕಟ್ಟುಗಳು ಮಂಜೂರಿ

ಯಲ್ಲಾಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಯಲ್ಲಾಪುರ, ಮುಂಡಗೋಡ ಹಾಗೂ ಬನವಾಸಿಗಳಲ್ಲಿ 46.85 ಕೋಟಿ ರೂ ವೆಚ್ಚದಲ್ಲಿ 21 ಕಿಂಡಿ ಆಣೆಕಟ್ಟುಗಳನ್ನು ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ್ ಪ್ರಯತ್ನದ ಫಲವಾಗಿ ಮಂಜೂರಿಯಾಗಿದೆ.



ಯಲ್ಲಾಪುರ ತಾಲೂಕು ವ್ಯಾಪ್ತಿಯಲ್ಲಿ 7 ಕಿಂಡಿ ಆಣೆಕಟ್ಟು ಮಂಜೂರಾಗಿದ್ದು, ಇಡಗುಂದಿ ಪಂಚಾಯತ ದೋಣಗಾರ ಹಳ್ಳಕ್ಕೆ ಮುಂಡಗೋಡೆ ಮನೆ ಹತ್ತಿರ ಕಿಂಡಿ ಆಣೆಕಟ್ಟು ಮತ್ತು ಕಾಲುವೆ ನಿರ್ಮಾಣಕ್ಕೆ 100 ಲಕ್ಷ ರೂ, ಇಡಗುಂದಿ ಪಂಚಾಯತದ ಗುಳ್ಳಾಪುರ ಬಂದಿಕೇರಿ (ಅರೆಬೈಲ್ ಶಾನಪಾಲ) ಹತ್ತಿರ ಹಳ್ಳಕ್ಕೆ ಕಿಂಡಿ ಅಣೆಕಟ್ಟು ಸಹಿತ ಸೇತುವೆ ನಿರ್ಮಾಣಕ್ಕೆ 100 ಲಕ್ಷ ರೂ, ಚಂದಗುಳಿ ಪಂಚಾಯತ ಕೆರೆಪಾಲ ಸ.ನಂ.61 ರ ಹತ್ತಿರ ಹಳ್ಳಕ್ಕೆ ಕಿಂಡಿ ಆಣೆಕಟ್ಟು ಸಹಿತ ಸೇತುವೆ ನಿರ್ಮಾಣಕ್ಕೆ 100 ಲಕ್ಷ ರೂ, ಉಮ್ಮಚಗಿ ಪಂಚಾಯತ ಸುರೇಮನೆ ಹಳ್ಳಕ್ಕೆ ಕಿಂಡಿ ಆಣೆಕಟ್ಟು ಸಹೀತ ಸೇತುವೆ ನಿರ್ಮಾಣಕ್ಕೆ 160 ಲಕ್ಷ ರೂ, ನಂದೊಳ್ಳಿ ಪಂಚಾಯತ ಬಾಲೆಕಣಿ ಶಾಲೆ ಹತ್ತಿರ ಬಾಳೆಗದ್ದೆ ಹಳ್ಳಕ್ಕೆ ಕಿಂಡಿ ಆಣೆಕಟ್ಟು ಸಹಿತ ಸೇತುವೆ ನಿರ್ಮಾಣಕ್ಕೆ 100 ಲಕ್ಷ ರೂ, ನಂದೊಳ್ಳಿ ಪಂಚಾಯತದ ಹೊಳೆಮಡು ಗ್ರಾಮ ಮಧ್ಯ ಸೇತುವೆ ಸಹಿತ ಕಿಂಡಿ ಅಣೆಕಟ್ಟು ನಿರ್ಮಾಣಕ್ಕೆ 100 ಲಕ್ಷ ರೂ, ಆನಗೋಡ ಪಂಚಾಯತ ಹೊಸಮನೆ ಹಳ್ಳಕ್ಕೆ ಕಿಂಡಿ ಆಣೆಕಟ್ಟು ಸಹಿತ ಸೇತುವೆ ನಿರ್ಮಾಣಕ್ಕೆ 100 ಲಕ್ಷ ರೂ

ಮುಂಡಗೋಡ ತಾಲೂಕಿನ ವ್ಯಾಪ್ತಿಯಲ್ಲಿ 6 ಕಿಂಡಿ ಆಣೆಕಟ್ಟು ಸಹೀತ ಸೇತುವೆ ನಿರ್ಮಾಣ ಕಾಮಗಾರಿ ಹಣ ಮಂಜೂರಿಯಾಗಿದೆ. ಕಾತೂರ ಪಂಚಾಯತದ ಸಿಂಗನಳ್ಳಿ ಹಳ್ಳಕ್ಕೆ ಕಿಂಡಿ ಆಣೆಕಟ್ಟು ಸಹಿತ ಸೇತುವೆ ನಿರ್ಮಾಣಕ್ಕೆ 100 ಲಕ್ಷ ರೂ, ಕಾತೂರ ಪಂಚಾಯತದ ಹುಲಿಹೊಂಡಾ ಗೌಳಿದಡ್ಡಿ ಹತ್ತಿರ ಹಳ್ಳಕ್ಕೆ ಕಿಂಡಿ ಆಣೆಕಟ್ಟು ಸಹಿತ ಸೇತುವೆ ನಿರ್ಮಾಣಕ್ಕೆ 100 ಲಕ್ಷ ರೂ,

ಸಾಲಗಾಂವ ಪಂಚಾಯತದ ಜೋಗೇಶ್ವರಿ ಹಳ್ಳಕ್ಕೆ ಕಿಂಡಿ ಅಣೆಕಟ್ಟು ಸಹಿತ ಸೇತುವೆ ನಿರ್ಮಾಣಕ್ಕೆ 100 ಲಕ್ಷ ರೂ, ಬಾಚಣಕಿ ಪಂಚಾಯತದ ನ್ಯಾಸರ್ಗಿ ಹಳ್ಳಕ್ಕೆ ಕಿಂಡಿ ಅಣೆಕಟ್ಟು ಸಹಿತ ಸೇತುವೆ ನಿರ್ಮಾಣಕ್ಕೆ 100 ಲಕ್ಷ ರೂ, ಇಂದೂರ ಪಂಚಾಯತದ ಇಂದಿರಾನಗರ ಮುಂಗ್ಯೆರವರ ಜಮೀನಿನ ಹತ್ತಿರ ಕಿಂಡಿ ಆಣೆಕಟ್ಟು ಸಹಿತ ಸೇತುವೆ ನಿರ್ಮಾಣಕ್ಕೆ 100 ಲಕ್ಷ ರೂ, ಮೈನಳ್ಳಿ ಪಂಚಾಯತದ ಕುದುರೆನಾಲಾ ಹಳ್ಳಕ್ಕೆ ಕಿಂಡಿ ಅಣೆಕಟ್ಟು ಸಹಿತ ಸೇತುವೆ ನಿರ್ಮಾಣಕ್ಕೆ 100 ಲಕ್ಷ ರೂ,

ಬನವಾಸಿ ಹೋಬಳಿ ವ್ಯಾಪ್ತಿಯಲ್ಲಿ 8 ಕಿಂಡಿ ಆಣೆಕಟ್ಟು ಸಹೀತ ಸೇತುವೆಗಳು ಮಂಜೂರಾಗಿದೆ. ಬಿಸಲಕೊಪ್ಪ ಪಂಚಾಯತದ ಅದ್ನಳ್ಳಿ ಹಳ್ಳಕ್ಕೆ ಕಿಂಡಿ ಆಣೆಕಟ್ಟು ಹಾಗೂ ಕಾಂಕ್ರೀಟ್ ತಡೆಗೋಡೆ ನಿರ್ಮಾಣಕ್ಕೆ 150 ಲಕ್ಷ ರೂ, ಬಿಸಲಕೊಪ್ಪ ಪಂಚಾಯತದ ಶಿವಳ್ಳಿ ಗ್ರಾಮ ಬೈಲಗದ್ದೆ ಹತ್ತಿರ ಕಿಂಡಿ ಆಣೆಕಟ್ಟು ನಿರ್ಮಾಣಕ್ಕೆ 200 ಲಕ್ಷ ರೂ, ಬಿಸಲಕೊಪ್ಪ ಪಂಚಾಯತದ ದೊಡ್ಡಬೇಣ ಹತ್ತಿರ ಕಿಂಡಿ ಆಣೆಕಟ್ಟು ನಿರ್ಮಾಣಕ್ಕೆ 120 ಲಕ್ಷ ರೂ, ಬಿಸಲಕೊಪ್ಪ ಪಂಚಾಯತದ ಮುದ್ದಿನಸರ ಹಳ್ಳಕ್ಕೆ ಹತ್ತಿರ ಕಿಂಡಿ ಆಣೆಕಟ್ಟು ನಿರ್ಮಾಣಕ್ಕೆ 100 ಲಕ್ಷ ರೂ, ಬಿಸಲಕೊಪ್ಪ ಪಂಚಾಯತದ ಕೊರ್ಸೆ ಹತ್ತಿರ ಕಿಂಡಿ ಆಣೆಕಟ್ಟು ನಿರ್ಮಾಣಕ್ಕೆ 55 ಲಕ್ಷ ರೂ, ಬಿಸಲಕೊಪ್ಪ ಪಂಚಾಯತದ ಜಂಬೆಕೊಪ್ಪ ಹಳ್ಳಕ್ಕೆ ಕಿಂಡಿ ಆಣೆಕಟ್ಟು ನಿರ್ಮಾಣಕ್ಕೆ 60 ಲಕ್ಷ ರೂ, ಉಂಚಳ್ಳಿ ಪಂಚಾಯತದ ಕೆಬ್ಬೆ ಹತ್ತಿರ ಸ್ಥಳಿಯ ಹಳ್ಳಕ್ಕೆ ಸೇತುವೆ ಸಹಿತ ಕಿಂಡಿ ಆಣೆಕಟ್ಟು ನಿರ್ಮಾಣಕ್ಕೆ 150 ಲಕ್ಷ ರೂ, ಭಾಶಿ ಪಂಚಾಯತದ ಭಾಶಿ ಹತ್ತಿರ ಸ್ಥಳಿಯ ಹಳ್ಳಕ್ಕೆ ಸೇತುವೆ ಸಹಿತ ಕಿಂಡಿ ಆಣೆಕಟ್ಟು ನಿರ್ಮಾಣಕ್ಕೆ 400 ಲಕ್ಷ ರೂ ಮಂಜೂರಿಯಾಗಿದೆ.

ಸಚಿವ ಶಿವರಾಮ್ ಹೆಬ್ಬಾರ್ ಈ ಕಿಂಡಿ ಆಣೆಕಟ್ಟುಗಳಿಗೆ ವಿಶೇಷವಾಗಿ ಯೋಜನೆ ಸಿದ್ಧಪಡಿಸಿದ್ದು, ಎರಡು ಗ್ರಾಮಗಳನ್ನು ಸಂಪರ್ಕಿಸಲು ಮೇಲೆ ಕಾಂಕ್ರೀಟ್ ಕಿಂಡಿ ಅಣೆಕಟ್ಟು ಹಾಕಿ ಸಾರ್ವಜನಿಕರ ಓಡಾಟಕ್ಕೆ ಸಾಧ್ಯವಾಗಲಿದೆ. ಹೀಗಾಗಿ ಒಂದು ಊರಿನಿಂದ ಮತ್ತೊಂದು ಊರಿಗೆ ಅತ್ಯಂತ ಹತ್ತಿರದ ಸಂಪರ್ಕ ಕಿಂಡಿ ಅಣೆಕಟ್ಟು ಒದಗಿಸಲಿದೆ.

ಕ್ಷೇತ್ರದ ಒಟ್ಟು 1200 ಹೆಕ್ಟೇರ್ ಕೃಷಿ ಭೂಮಿಗೆ ಅಣೆಕಟ್ಟುಗಳು ಬೇಸಿಗೆಯಲ್ಲಿ ನೀರು ಒದಗಿಸಲಿವೆ. ಕಿಂಡಿ ಆಣೆಕಟ್ಟು ನಿರ್ಮಾಣದಿಂದ ಅಂತರ್ಜಲದ ಮಟ್ಟವೂ ಕೂಡ ಹೆಚ್ಚಾಗಲಿದ್ದು ರೈತರಿಗೆ ಹಾಗೂ ಗ್ರಾಮೀಣ ಭಾಗದ ಜನತೆಗೆ ಅನುಕೂಲ ಆಗಲಿದೆ.



**ಶಿವರಾಮ ಹೆಬ್ಬಾರ್ ಶಾಸಕರು, ಸಚಿವರಾ ಆಗಿ ಆಯ್ಕೆಯಾದ ನಂತರ ಯಲ್ಲಾಪುರ ಕ್ಷೇತ್ರ ಅತ್ಯಂತ ಹೆಚ್ಚು ವೇಗದಿಂದ ಪ್ರಗತಿಯನ್ನು ಸಾಧಿಸುತ್ತಿದ್ದು, ಹೊಸ ಹೊಸ ಪ್ರಯೋಗಗಳು ಸಾರ್ವಜನಿಕರಿಗೆ ಗ್ರಾಮೀಣ ಭಾಗದ ಜನರಿಗೆ ಅನುಕೂಲತೆಗಳನ್ನು ಒದಗಿಸಿದೆ.**

# ಕಟ್ಟಡ ಕಾರ್ಮಿಕರಿಗೆ ಭರಪೂರ ಕೊಡುಗೆ



ಬೆಂಗಳೂರು : ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಶರತ್ತುಗಳು )ನಿಯಮಗಳಿಗೆ ತಿದ್ದುಪಡಿ ಮಾಡಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.ಇದರಿಂದಾಗಿ ಕಾರ್ಮಿಕರ ಧನ ಸಹಾಯ, ಸಾಮಾಜಿಕ ಭದ್ರತೆ ಯೋಜನೆಗಳ ಮೊತ್ತ ಹೆಚ್ಚಳವಾಗಲಿದೆ ಅಲ್ಲದೆ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಎಲ್ಲ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿ ಮಾಡಲು ಈ ತಿದ್ದುಪಡಿ ಮಾಡಲಾಗಿದೆ. ಇದಕ್ಕೆ ಈಗಾಗಲೇ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ಪಡೆಯಲಾಗಿತ್ತು.

## ತಿದ್ದುಪಡಿಯ ಪ್ರಮುಖ ಅಂಶಗಳು :

- ಪಿಂಚಣಿ ಸೌಲಭ್ಯ ರೂ.2000 ದಿಂದ ರೂ.3000ಕ್ಕೆ ಹೆಚ್ಚಳ
- ಗೃಹ ಭಾಗ್ಯ ಸೌಲಭ್ಯದಡಿ 21 ರಿಂದ 50 ವರ್ಷದ ನೋಂದಾಯಿತ ಫಲಾನುಭವಿಗಳಿಗೆ 10 ಕಂತುಗಳಲ್ಲಿ ಮನೆ ಕಟ್ಟಲು ಸಾಲ ನೀಡಲು ನಿಯಮಗಳ ಸರಳೀಕರಣ
- ಹೆರಿಗೆ ಸೌಲಭ್ಯದಡಿ ಸಹಾಯಧನ 50 ಸಾವಿರಕ್ಕೆ ಹೆಚ್ಚಳ
- ಅಂತಿಮ ಸಂಸ್ಕಾರ ವೆಚ್ಚ ಸೌಲಭ್ಯದ ಅಡಿ ಸಹಾಯ ಧನ ರೂ.50,000 ದಿಂದ ರೂ.71,000 ಕ್ಕೆ ಹೆಚ್ಚಳ ಕೋವಿಡ್‌ನಿಂದ ಫಲಾನುಭವಿ ಮೃತಪಟ್ಟರೆ ಅವಲಂಬಿತರಿಗೆ ರೂ.2 ಲಕ್ಷ ಸಹಾಯಧನ
- ವೈದ್ಯಕೀಯ ಸೌಲಭ್ಯದಡಿ ಸಹಾಯಧನ ರೂ.10,000 ದಿಂದ ರೂ.20,000 ಕ್ಕೆ ಹೆಚ್ಚಳ, ಕಾರ್ಮಿಕರು ಕೆಲಸ ನಿರ್ವಹಿಸುವ ಸ್ಥಳದಲ್ಲಿ ಸಂಚಾರಿ ವೈದ್ಯಕೀಯ ಘಟಕಗಳ ಸ್ಥಾಪನೆ. ಅವಶ್ಯಕತೆ ಇದ್ದಾಗ ಪೌಷ್ಟಿಕ ಆಹಾರ ಕಿಟ್‌ಗಳ ವಿತರಣೆ
- ಮದುವೆ ಸಹಾಯಧನದ ಮೊತ್ತ ರೂ.50,000 ದಿಂದ 60,000 ಕ್ಕೆ ಏರಿಕೆ
- ಫಲಾನುಭವಿಗಳ ಮಕ್ಕಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯಲು ತರಬೇತಿ, ಕಲಿಕಾ ಕಿಟ್, ಕಂಪ್ಯೂಟರ್, ಲ್ಯಾಪ್‌ಟಾಪ್ ಮತ್ತು ಟ್ಯಾಬ್ ವಿತರಣೆ
- ಫಲಾನುಭವಿ ಕೆಲಸ ಮಾಡುವ ಸ್ಥಳದಲ್ಲಿ ಅಪಘಾತದಿಂದ ಮೃತಪಟ್ಟರೆ ಅವಲಂಬಿತರಿಗೆ ಪರಿಹಾರ ರೂ. 2 ಲಕ್ಷದಿಂದ ರೂ.5ಲಕ್ಷಕ್ಕೆ ಏರಿಕೆ
- ಅನಿಲ ಭಾಗ್ಯ ಸೌಲಭ್ಯವನ್ನು ಕೈಬಿಡಲಾಗುವುದು. ಕೆಎಸ್‌ಆರ್‌ಟಿಸಿ ಬಸ್‌ಪಾಸ್ ಸೌಲಭ್ಯ ಒದಗಿಸುವುದು
- ಯೋಜನೆಗಳ ಫಲಾನುಭವಿಗಳು ನೋಂದಣಿ ಸಮಯದಲ್ಲಿ ಮತ್ತು ಮಂಡಳಿಗೆ ಪಾವತಿಸಬೇಕಾದ ವಂತಿಗೆಯನ್ನು ಕೈಬಿಡುವುದು, ಅನರ್ಹ ಕಾರ್ಮಿಕರು ನೋಂದಣಿ ಮಾಡುವುದನ್ನು ತಡೆಗಟ್ಟುವುದು
- ಮಂಡಳಿಯ ಕಾರ್ಯದರ್ಶಿಗಳಿಗೆ ಆರ್ಥಿಕ ಇಲಾಖೆ ನಿಗದಿ ಮಾಡಿರುವ ವಿತ್ತಾಧಿಕಾರ ರೂ. 2 ಕೋಟಿಯಿಂದ ರೂ.2.5 ಕೋಟಿಗೆ ಹೆಚ್ಚಿಸುವುದು

# ಶ್ರಮಿಕರ ಶ್ರೇಯೋಭಿವೃದ್ಧಿಗೆ ಕಾರ್ಮಿಕ ಇಲಾಖೆಯ ಪಣ




## 1.0 ಯಶೋಗಾಥೆ

**3.02 ಲಕ್ಷ** ಬಾಕಿ ಉಳಿದಿದ್ದ ಮತ್ತು ಹೊಸದಾಗಿ ಸ್ವೀಕರಿಸಿದ ಅರ್ಜಿಗಳು

**2.83 ಲಕ್ಷ** ವಿಲೇವಾರಿಯಾದ ಅರ್ಜಿಗಳು

**1.53 ಲಕ್ಷ** ಪ್ರಯೋಜನ ಪಡೆದ ಕಾರ್ಮಿಕರು

**89.04 ಕೋಟಿ** ಪಾವತಿಸಿದ ಮೊತ್ತ

# ಕಾರ್ಮಿಕ ಅದಾಲತ್ 2.0

ರಾಜ್ಯ ಕಾರ್ಮಿಕ ಇಲಾಖೆ ಶ್ರಮಿಕ ವರ್ಗದ ಬಾಕಿ ಅರ್ಜಿಗಳನ್ನು ಕಾಲಾವಧಿಯಲ್ಲಿ ಇತ್ಯರ್ಥಪಡಿಸಿ ಸವಲತ್ತುಗಳ ವಿತರಣೆ ಯಜ್ಞ ಆರಂಭಿಸಿದ್ದು, ಅದಕ್ಕಾಗಿ ಕಾರ್ಮಿಕ ಅದಾಲತ 2.0 ಅನ್ನು ಆಯೋಜಿಸಿದ್ದು ರಾಜ್ಯಾದಾದ್ಯಂತ ಕಾರ್ಮಿಕರಿಂದ ಅರ್ಜಿ ಪಡೆಯುವ ಪ್ರಕ್ರಿಯೆ ಆರಂಭಿಸಿದೆ.

ದೇಶವು ಸ್ವಾತಂತ್ರೋತ್ಸವ ಅಮೃತ ಮಹೋತ್ಸವ ಆಚರಣೆ ಹಿನ್ನೆಲೆಯಲ್ಲಿ ಈ ಮಹತ್ವಾಕಾಂಕ್ಷಿ ಯೋಜನೆಯನ್ನು ಪುನ: ಆಯೋಜಿಸಲಾಗಿದ್ದು, ಶ್ರಮಿಕ ವರ್ಗಕ್ಕೆ ಇಲಾಖೆಯಿಂದ ನೀಡಲಾಗುವ ಸೌಲಭ್ಯಗಳು, ಅಗತ್ಯ ನೆರವು ಮತ್ತು ಯೋಜನೆಗಳನ್ನು ತ್ವರಿತಗತಿಯಲ್ಲಿ ತಲುಪಿಸುವ ಸಲುವಾಗಿ ಕಾರ್ಮಿಕ ಅದಾಲತ್ 2.0 ಅನ್ನು ಆಯೋಜಿಸಲಾಗಿದ್ದು. ಇದೇ 15 ರಿಂದ ಅರ್ಜಿ ಸಲ್ಲಿಕೆಗೆ ಅವಕಾಶ ಮಾಡಿ ಕೊಡಲಾಗಿದೆ. ಜುಲೈ 31 ರವರೆಗೆ ಅರ್ಜಿಗಳ ಸಲ್ಲಿಕೆಗೆ ಅವಕಾಶವಿದ್ದು, ಸಲ್ಲಿಕೆಯಾದ ಅರ್ಜಿಗಳು ಮತ್ತು ಬಾಕಿ ಅರ್ಜಿಗಳನ್ನು ರಾಜ್ಯದಾದ್ಯಂತ ಆಗಸ್ಟ್ 1 ರಿಂದ ಮೊದಲ್ಗೊಂಡು 15 ನೇ ತಾರೀಖಿನವರೆಗೆ ವಿಲೇವಾರಿ ಮಾಡಲು ಸಚಿವ ಶಿವರಾಮ ಹೆಬ್ಬಾರ್ ಸೂಚಿಸಿದ್ದಾರೆ.

ಕಾರ್ಮಿಕ ಅದಾಲತ್‌ಗೆ ಅರ್ಜಿ ಸಲ್ಲಿಕೆ ಸಂಬಂಧ ಹೆಚ್ಚಿನ ಮಾಹಿತಿಗೆ ಸ್ಥಳೀಯ ಕಾರ್ಮಿಕ ಅಧಿಕಾರಿಗಳು, ಹಿರಿಯ ಕಾರ್ಮಿಕ ನಿರೀಕ್ಷಕರು ಮತ್ತು ಕಾರ್ಮಿಕ ನಿರೀಕ್ಷಕರನ್ನು ಸಂಪರ್ಕಿಸುವಂತೆ ಸೂಚಿಸಿರುವ ಇಲಾಖೆಯು ಉಚಿತ ಸಹಾಯವಾಣಿ 155214 ಕ್ಕೆ ಕರೆ ಮಾಡಿ ಮಾಹಿತಿ ಪಡೆಯುವಂತೆ ಸೂಚಿಸಿದೆ.

## ಬಾಕಿ ಉಳಿದ ಅರ್ಜಿಗಳ ವಿಲೇವಾರಿಗೆ ಕ್ರಮ

**ಕಾರ್ಮಿಕ ಇಲಾಖೆಯು ಆಗಸ್ಟ 1, 2022 ರಿಂದ ಆಗಸ್ಟ 15, 2022 ರವರೆಗೆ ಹೊಸದಾಗಿ ಸ್ವೀಕರಿಸಿದ ಹಾಗೂ ಬಾಕಿ ಉಳಿದ ಅರ್ಜಿಗಳೆಲ್ಲವನ್ನು ಕಳೆದ ಬಾರಿಯಂತೆ ವಿಲೇವಾರಿಗೊಳಿಸುವ ಗುರಿಯನ್ನು ಹೊಂದಿದೆ.**







## ಸರಕಾರಿ ಸೌಲಭ್ಯ

# ಪ್ರಧಾನ ಮಂತ್ರಿ ಮುದ್ರಾ ಯೋಜನೆ

ಪ್ರಧಾನ ಮಂತ್ರಿ ಮುದ್ರಾ ಯೋಜನೆ (PMMY) ಭಾರತ ಸರ್ಕಾರದ ಒಂದು ಪ್ರಮುಖ ಯೋಜನೆ ಯಾಗಿದೆ "ಅನಿಧಿತರಿಗೆ ನಿಧಿ" ಒದಗಿಸುವುದರ ಮೂಲಕ ಉದ್ಯಮಗಳು, ಔಪಚಾರಿಕ ಆರ್ಥಿಕ ವ್ಯವಸ್ಥೆಗೆ ಉತ್ತಮ ಮುನ್ನುಡಿಯಾಗಿದೆ.ಇದು ಸಣ್ಣ ಮತ್ತು ಅತಿಸಣ್ಣ ಉದ್ಯಮದಾರರಿಗೆ ಕೃಷಿಯೇತರ ಆದಾಯದ ಚಟುವಟಿಕೆಗಳಿಗೆ ಪಿಎಸ್ಯು ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳು, ಖಾಸಗಿ ವಲಯದ ಬ್ಯಾಂಕ್,ವಿದೇಶಿ ಬ್ಯಾಂಕುಗಳು, ಕಿರು ಹಣಕಾಸು ಸಂಸ್ಥೆಗಳು (MFI) ಮತ್ತು ನಾನ್ ಬ್ಯಾಂಕಿಂಗ್ ಹಣಕಾಸು ಕಂಪನಿಗಳು (NBFC) ಇವುಗಳ ಮೂಲಕ ಹತ್ತು ಲಕ್ಷ ರೂಪಾಯಿ ವರಿಗೆ ಸಾಲಪಡೆಯಲು ಎಡೆಮಾಡಿಕೊಡುತ್ತದೆ. ಈ ಯೋಜನೆಯನ್ನು ಮಾನ್ಯ ಪ್ರಧಾನ ಮಂತ್ರಿಗಳು 8 ನೇ ಏಪ್ರಿಲ್, 2015 ರಂದು ಬಿಡುಗಡೆ ಮಾಡಿದರು

**ಅರ್ಹತೆ:**

ಯಾವುದೇ ಭಾರತೀಯ ನಾಗರಿಕ ಕೃಷಿಯೇತರ ಆದಾಯದ ಚಟುವಟಿಕೆಗೆ ಉದಾಹರಣೆಗೆ ಉತ್ಪಾದನೆ, ಪರಿಷ್ಕರಣೆ, ವ್ಯಾಪಾರ ಅಥವಾ ಸೇವಾವಲಯ ಇವುಗಳಲ್ಲಿ ತೊಡಗಲು ಇಚ್ಚಿಸಿ ರೂ 10 ಲಕ್ಷದ ವರೆಗೆ ಸಾಲಪಡೆಯಲು ಬಯಸಿದಲ್ಲಿ ಬ್ಯಾಂಕ್, MFI, ಅಥವಾ NBFC ಸಂಪರ್ಕಿಸಿ ಮೈಕ್ರೋ ಯೂನಿಟ್ ಡೆವಲಪ್ಮೆಂಟ್ & ರಿಫೈನೆನ್ಸ್ ಏಜೆನ್ಸಿ ಲಿಮಿಟೆಡ್ (ಮುದ್ರಾ) ಪ್ರಧಾನ ಮಂತ್ರಿ ಮುದ್ರಾ ಯೋಜನೆ (PMMY) ಅಡಿಯಲ್ಲಿ ಸಾಲ ಪಡೆಯಬಹುದು.

**ವಿವಿಧ ರೀತಿಯ ಸಾಲಗಳು : ಪ್ರಧಾನ ಮಂತ್ರಿ ಮುದ್ರಾ ಯೋಜನೆ ಅಡಿಯಲ್ಲಿ, ಈ ಕೆಳಗಿನ ಸಾಲ ಯೋಜನೆಗಳು ಲಭ್ಯವಿರುತ್ತದೆ**

**ಶಿಶು**
ರೂ . 50,000/- ವರೆಗೆ ಒಳಗೊಂಡ ಸಾಲ

**ಕಿಶೋರ್**
- ರೂ 50,000 /- ದಿಂದ ರೂ 5 ಲಕ್ಷ ವರೆಗೆ ಸಾಲ

**ತರುಣ್**
ರೂ 5 ಲಕ್ಷ ದಿಂದ ರೂ. 10 ಲಕ್ಷ ವರೆಗೆ ಸಾಲ

ಉಲ್ಲೇಖಿತ ಶಿಶು,ಕಿಶೋರ್ ಮತ್ತು ತರುಣ್ ಹೆಸರುಗಳು ಫಲಾನುಭವಿಗಳ/ ವಾಣಿಜ್ಯೋದ್ಯಮಿಗಳ ಬೆಳವಣಿಗೆ / ಅಭಿವೃದ್ಧಿ ಮತ್ತು ಹಣಕಾಸು ಅಗತ್ಯಗಳನ್ನು ಹಂತ ಹಂತ ವಾಗಿ ಪ್ರತಿನಿಧಿಸುತ್ತದೆ.

ಶೇಕಡ ಅರವತ್ತರಷ್ಟು ಆದ್ಯತೆಯು 'ಶಿಶು' ಫಲಾನುಭವಿಗಳಿಗೆ ಮತ್ತು ಒಳದ ವರ್ಗಗಳಿಗೆ ನಂತರದ ಆದ್ಯತೆ ಯನ್ನು ನೀಡಲಾಗುವುದು. PMMY ಅಡಿಯಲ್ಲಿ ನೀಡಿದ ಸಾಲಕ್ಕೆ ಯಾವುದೇ ಸಬ್ಸಿಡಿ ಇರುವುದಿಲ್ಲ, ಆದಾಗ್ಯೂ, ಸಾಲ ಪ್ರಸ್ತಾಪವು ಕೆಲವು ಸರ್ಕಾರಿ ಯೋಜನೆ ಲಿಂಕ್ ಆಗಿದ್ದ ವೇಳೆ, ಅದರಲ್ಲಿ ಸರ್ಕಾರದ ಬಂಡವಾಳ ಸಬ್ಸಿಡಿ ಒದಗಿಸುವ ಆಯ್ಕೆ ಇದ್ದರೆ , ಆ ಸಮಯದಲ್ಲಿ PMMY ಅಡಿಯಲ್ಲಿ ಅರ್ಹತೆಯನ್ನು ಪಡೆದಿರುತ್ತದೆ

## ಒಳಗೊಂಡಿರುವ ಕ್ಷೇತ್ರಗಳು

ನಿರ್ದಿಷ್ಟ ವ್ಯಾಪಾರ ಚಟುವಟಿಕೆಗಳು, ನಿರ್ಧಿಷ್ಟ ಕ್ಷೇತ್ರದಲ್ಲಿ ಚಟುವಟಿಕೆ ಅಗತ್ಯಗಳನ್ನು ಪೂರೈಸಲು ಫಲಾನುಭವಿಗಳಿಗೆ ಬೇಕಾದ ಅಗತ್ಯತೆ ಕಡೆಗೆ ಗಮನ ಹರಿಸಲಾಗುತ್ತದೆ. ಮೊದಲಿಗೆ ಹೆಚ್ಚಿನ ಸಾಂದ್ರತೆಯ ಆಧಾರದ ಮೇಲೆ ಕೆಲವು ಚಟುವಟಿಕೆಗಳು / ಕ್ಷೇತ್ರಗಳಲ್ಲಿ ವ್ಯವಹಾರಗಳಿಗೆ, ಯೋಜನೆಗಳನ್ನು ಸೂಚಿಸಲಾಗುತ್ತದೆ

**ಸಾರಿಗೆ ವಲಯ / ಚಟುವಟಿಕೆ :** ಇದು ಆಟೋ ರಿಕ್ಷಾ, ಸಣ್ಣ ಸರಕುಗಳು ಸಾರಿಗೆ ವಾಹನ, ೩ ಚಕ್ರ ವಾಹನ, ಇ-ರಿಕ್ಷಾ, ಕಾರು, ಟ್ಯಾಕ್ಸಿ, ಇತ್ಯಾದಿ ಸರಕು ಮತ್ತು ಸಾರಿಗೆ ವಾಹನಗಳ ಖರೀದಿಯನ್ನು ಬೆಂಬಲಿಸುತ್ತದೆ

**ಸಮುದಾಯ, ಸಾಮಾಜಿಕ ಮತ್ತು ವೈಯಕ್ತಿಕ ಸೇವೆ ಚಟುವಟಿಕೆಗಳು:**

ಸಲೂನ್, ಬ್ಯೂಟಿಪಾರ್ಲರ್‌ಗಳು, ವ್ಯಾಯಾಮ ಶಾಲೆ, ಅಂಗಡಿಗಳು, ಹೊಲಿಗೆ ಅಂಗಡಿಗಳು, ಡ್ರೈ ಕ್ಲೀನಿಂಗ್,ಸೈಕಲ್ ಮತ್ತು ಮೋಟರ್ ರಿಪೇರಿ ಮಾಡುವ ಅಂಗಡಿ, DTPಮತ್ತು ಜೆರಾಕ್ಸ್ , ಮೆಡಿಸಿನ್ ಅಂಗಡಿಗಳು, ಕೊರಿಯರ್ ಏಜೆಂಟ್ಸ್, ಇತ್ಯಾದಿಗಳಿಗೆ

**ಆಹಾರ ಉತ್ಪನ್ನಗಳ ವಲಯ**

ಹಪ್ಪಳ ತಯಾರಿಕೆ, ಅಚಾರ್ ತಯಾರಿಕೆ, ಜಾಮ್ / ಜೆಲ್ಲಿ ತಯಾರಿಕೆ, ಗ್ರಾಮೀಣ ಮಟ್ಟದಲ್ಲಿ ಕೃಷಿ ಉತ್ಪನ್ನಗಳ ಸಂರಕ್ಷಣೆ, ಸಿಹಿ ಅಂಗಡಿಗಳು, ಸಣ್ಣ ಸೇವೆ ಆಹಾರ ಮಳಿಗೆಗಳು ಮತ್ತು ಅಡುಗೆ / ಕ್ಯಾಂಟೀನ್ ಸೇವೆಗಳು, ಶೀತಲ ಸರಪಳಿ ವಾಹನಗಳು ಶೀತ ಉಗ್ರಾಣಗಳ ಚಟುವಟಿಕೆ, ಐಸ್ ತಯಾರಿಕೆ ಘಟಕಗಳು, ಐಸ್ ಕ್ರೀಮ್ ಮಾಡುವ ಘಟಕಗಳು, ಬಿಸ್ಕತ್ತು, ಬ್ರೆಡ್ ಮತ್ತು ಬನ್ ತಯಾರಿಕೆ, ಇತ್ಯಾದಿ ಗಳಿಗೆ ಬೆಂಬಲ ಒದಗಿಸುವುದಾಗಿದೆ

**ಜವಳಿ ಉತ್ಪನ್ನಗಳ ಕ್ಷೇತ್ರ**

ಕೈಮಗ್ಗ, ಮಗ್ಗ, ಚಿಕನ್ ಕೆಲಸ, ಜರಿ ಮತ್ತು ಝುರ್ದೋಝಿ ಕೆಲಸ, ಸಾಂಪ್ರದಾಯಿಕ ಕಸೂತಿ ಮತ್ತು ಕೈ ಕೆಲಸ, ಸಾಂಪ್ರದಾಯಿಕ ಬಣ್ಣ ಮತ್ತು ಮುದ್ರಣ, ಉಡುಪು ವಿನ್ಯಾಸ, ಹೆಣಿಗೆ, ಹತ್ತಿ ಬೆಸೆಯುವುದು, ಗಣಕೀಕೃತ ಕಸೂತಿ, ಹೊಲಿಗೆ ಮತ್ತು ಜವಳಿ ಉಡುಪು, ಮತ್ತು ಅದಕ್ಕೆ ಸಂಭದಪಟ್ಟ ಉತ್ಪನ್ನಗಳ ಚಟುವಟಿಕೆ, ಚೀಲಗಳು, ವಾಹನ ಭಾಗಗಳು, ಸಜ್ಜುಗೊಳಸುವ ಭಾಗಗಳು, ಇತ್ಯಾದಿ ಜವಾಬ್ದಾರಿ ಗಳನ್ನು ಬೆಂಬಲಿಸುತ್ತವೆ



## ಅರ್ಜಿ ಸಲ್ಲಿಸುವುದು ಹೇಗೆ

ಪ್ರಧಾನ ಮಂತ್ರಿ ಮುದ್ರಾ ಯೋಜನೆ (PMMY) ಅಡಿಯಲ್ಲಿ ನೆರವು ಪಡೆಯಲು ಬಯಸುವವರು, ತಮ್ಮ ಪ್ರದೇಶದಲ್ಲಿರುವ ಪಿಎಸ್ಯು ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳು, ಖಾಸಗಿ ವಲಯದ ಬ್ಯಾಂಕಗಳ ವಿದೇಶಿ ಬ್ಯಾಂಕುಗಳು, ಮೈಕ್ರೋ ಫೈನಾನ್ಸ್ – ಹಣಕಾಸು ಸಂಸ್ಥೆಗಳು ಯಾವುದೇ ಸ್ಥಳೀಯ ಶಾಖೆಗೆ ಸಂಪರ್ಕಿಸ ಬೇಕು ಸಂಸ್ಥೆಗಳು (MFI) ಮತ್ತು ನಾನ್ ಬ್ಯಾಂಕಿಂಗ್ ಹಣಕಾಸು ಕಂಪನಿಗಳು (NBFC). ನೆರವು ಸ್ಯಾಂಕ್ಷನ್ ಆಯಾ ಸಾಲ ಸಂಸ್ಥೆಯಲ್ಲಿ ಅರ್ಹತಾ ರೂಢಿಗಳನ್ನು ಪ್ರಕಾರ ಗಳ ವಿವರಣೆ ಯನ್ನು ನೀಡಲಾಗುವದು

## ಅರ್ಜಿ ಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು

ಗುರುತಿನ ಪ್ರಮಾಣ / ಸ್ವಯಂ ದೃಢೀಕರಿಸಿದ / ಮತದಾರರ ಐಡಿ ಕಾರ್ಡ್ ಚಾಲಕ ಪರವಾನಗಿಯ / ಪ್ಯಾನ್ ಕಾರ್ಡ್ / ಆಧಾರ್‌ಕಾರ್ಡ್ ಪಾಸ್ಪೋರ್ಟ್/ ಫೋಟೋ ಐಡಿ ಗಳು

ನಿವಾಸ ಪುರಾವೆ :

ಇತ್ತೀಚಿನ ದೂರವಾಣಿ ಬಿಲ್ / ವಿದ್ಯುತ್ ಬಿಲ್ / ಆಸ್ತಿ ತೆರಿಗೆ ಸ್ವೀಕೃತಿ (ಹಳೆಯ 2 ತಿಂಗಳ) / ಮತದಾರರ ಐಡಿ ಕಾರ್ಡ್ / ಆಧಾರ್ ಕಾರ್ಡ್ / ಬ್ಯಾಂಕ್ ಠೇವಣಿ ಪುಸ್ತಕ ಅಥವಾ ಇತ್ತೀಚಿನ ಖಾತೆ ಹೇಳಿಕೆಯ ಪಾಸ್ಪೋರ್ಟ್ ತಕ್ಕಂತೆ ಬ್ಯಾಂಕ್ ಅಧಿಕಾರಿಗಳು ದೃಢೀಕರಿಸಿದ / ವಸತಿ ಪ್ರಮಾಣಪತ್ರ / ಸರಕಾರ ಪ್ರಾಧಿಕಾರ / ಸ್ಥಳೀಯ ಪಂಚಾಯತ್ / ಪುರಸಭೆ ಬಿಡುಗಡೆಮಾಡಿದ ಪ್ರಮಾಣಪತ್ರ ಇತ್ಯಾದಿ

- ಅರ್ಜಿದಾರರ ಇತ್ತೀಚಿನ ಛಾಯಾಚಿತ್ರ (2 ಪ್ರತಿಗಳು) 6 ತಿಂಗಳ ಒಳಗೆ ತೆಗೆಸಿರುವಂತಹದು
- ಯಂತ್ರೋಪಕರಣಗಳನ್ನು ಮತ್ತು ಇತರ ವಸ್ತುಗಳನ್ನು ಖರೀದಿಸುವ ಉದ್ಧರಣ (ಕೊಟೇಶನ್)
- ಯಂತ್ರೋಪಕರಣಗಳುಮತ್ತು ವಸ್ತು ಗಳ ಸರಬರಾಜುದಾರ ಹೆಸರು ಮತ್ತು ವಿವರ ಮಾಲೀಕತ್ವಕ್ಕೆ ಸಂಬಂಧಿಸಿದ ನೋಂದಣಿ ಪ್ರಮಾಣಪತ್ರಗಳು ಇತರೆ ದಾಖಲೆಗಳ ಪ್ರತಿ, ವ್ಯಾಪಾರದ ಘಟಕ ವಿಳಾಸದ ಗುರುತು, ಉದ್ಯಮ ಗುರುತು ವಿಳಾಸ ಪುರಾವೆ ಎಸ್ಸಿ / ಎಸ್ಟಿ / ಒಬಿಸಿ / ಹಿಂದುಳಿದ ವರ್ಗದ ಬಗ್ಗೆ ಪುರಾವೆ

**ಗಮನಿಸಿ: ಎಲ್ಲಾ PMMY ಯೋಜನೆಗಳ ಬಗ್ಗೆ ಕೆಳಗಿನ ಮುಖ್ಯ ವಿಷಯಗಳು :**

**ಯಾವುದೇ ಸಂಸ್ಕರಣಾ ಶುಲ್ಕ (ಪ್ರೊಸೆಸಿಂಗ್ ಫಿ ) ಇರುವುದಿಲ್ಲ**

**ಯಾವುದೇ ಮೇಲಾಧಾರ ವಿರುವುದಿಲ್ಲ**

**ಸಾಲದ ಮರುಪಾವತಿಯ ಕಾಲ 5 ವರ್ಷಗಳ ವರೆಗೆ ವಿಸ್ತರಿಸಲಾಗಿದೆ**

**ಅರ್ಜಿದಾರರ ಯಾವುದೇ ಬ್ಯಾಂಕ್ / ಆರ್ಥಿಕ ಸಂಸ್ಥೆಗೆ ಲೋಪ ಮಾಡಿರಬಾರದು (ಡಿಫಾಲ್ಟ್ ಟರ್ ಆಗಿರಬಾರದು )**

# ನಮ್ಮೂರ ಸಾಧಕರು

## ಹಿರಿಯ ಸ್ವಾತಂತ್ರ್ಯ ಹೋರಾಟಗಾರ್ತಿ

## ಲೀಲಾಬಾಯಿಫಕ್ಕೀರಪ್ಪ ಇಂಗಳಗಿ

ಹಿರಿಯ ಸ್ವಾತಂತ್ರ್ಯ ಹೋರಾಟಗಾರರ ಹೆಸರಲ್ಲಿನಲ್ಲಿ ಮುಂಡಗೋಡ ತಾಲೂಕಿನ ಲೀಲಾಬಾಯಿ ಫಕ್ಕೀರಪ್ಪ ಇಂಗಳಗಿ ಚಿರಪರಿಚಿತ ಹೆಸರಾಗಿದೆ. 97ರ ಈ ಇಳ ವಯಸ್ಸಿನಲ್ಲಿಯೂ ಅವರು ಚಟುವಟಿಕೆಯಿಂದ ಕೆಲಸ ಮಾಡುತ್ತಾರೆ, ಉತ್ಸಾಹದ ಚಿಲುಮೆಯಂತಿದ್ದಾರೆ.

ಹೌದು,ಲೀಲಾಬಾಯಿ ಫಕ್ಕೀರಪ್ಪ ಇಂಗಳಗಿ ಮುಂಡಗೋಡ ತಾಲೂಕಿನಲ್ಲಿರುವ ಹಿರಿಯ ಸ್ವಾತಂತ್ರ್ಯ ಹೋರಾಟಗಾರರ ಕೊನೆಯ ಕೊಂಡಿ. 1942ರಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ 3 ತಿಂಗಳಕಾಲ ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿ ಕಠಿಣ ಶಿಕ್ಷೆ ಅನುಭವಿಸಿದ ದಿಟ್ಟ ಮಹಿಳೆ. ಹುಟ್ಟಿದ್ದು ಗದಗ ಜಿಲ್ಲೆಯ ಕದಡಿ ಗ್ರಾಮದಲ್ಲಿ ಇವರೇ ಹಿರಿಯ ಮಗಳು. ಎಸ್. ಎಸ್.ಎಲ್.ಸಿ.ಯವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ಶಾಲೆ ಕಲಿತದ್ದು ಹುಬ್ಬಳ್ಳಿಯ ಮಹಿಳಾ ಗಾಂಧಿ ಆಶ್ರಮ ವಿದ್ಯಾಪೀಠದಲ್ಲಿ ಆಗ ಅದು ಹರಿಜನ ಬಾಲಿಕಾ ಆಶ್ರಮವಾಗಿತ್ತು.



ಕ್ವಿಟ್ ಇಂಡಿಯಾ ಚಳುವಳಿ ವರ್ಷಾಚರಣೆ ಅಂಗವಾಗಿ ಹಿರಿಯ ಸ್ವಾತಂತ್ರ್ಯ ಹೋರಟಗಾರರನ್ನು ಜಿಲ್ಲಾಡಳಿತ ವತಿಯಿಂದ ಸನ್ಮಾನಿಸುತ್ತಿದೆ. ಅದರಂತೆ ಆಗಸ್ಟ್ 9 ರಂದು ಲೀಲಾಬಾಯಿ ಇಂಗಳಗಿ ಅವರ ಮನೆಗೆ ಜಿಲ್ಲಾಡಳಿತದವರು ತೆರಳಿ ಸನ್ಮಾನವನ್ನು ಮಾಡುತ್ತಿದ್ದಾರೆ.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ್ತಿ ಲೀಲಾಬಾಯಿ ಇಂಗಳಗಿ ಅವರ ಮನದಾಳದ ಮಾತು. ನನಗೀಗಾ 97 ವರ್ಷ. ನಾನು ಹುಬ್ಬಳ್ಳಿಯಲ್ಲಿ ಚಲೇ ಜಾವ ಚಳುವಳಿ ಸೇರಿದೆ. ಆಗಿನ್ನೂ ಕಲಿಯುತ್ತಿದ್ದೆ. ನನಗಾಗ 15-17 ವರ್ಷ ಇರಬಹುದು. ನಮ್ಮನ್ನು ನಂತರ ಬೆಳಗಾಂವದ ಹಿಂಡಲಗಾ ಜೈಲಿಗೆ ಕಳಿಸಿದ್ದರು. ಆರು ತಿಂಗಳು ನಿಮಗೆ ಜೈಲು ಎಂದು ತಿಳಿಸಿದ್ದರು, ನಾವು ಜೈಲಿನಲ್ಲಿದ್ದಾಗ ಮೃದುಲಾಬೆನ್ ಸಾರಾಬಾಯಿ, ಮಗವಾಯಿ ಪಟೇಲ ಮುಂತಾಗಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಜೈಲಿನಲ್ಲಿದ್ದರು. ಜೈಲಿನಲ್ಲಿ ಬೆಳಿಗ್ಗೆ ಎದ್ದು ಸ್ನಾನ, ಪ್ರಾರ್ಥನೆ ಇತ್ಯಾದಿಗಳಲ್ಲೇ ನಾವು ಸಮಯ ಕಳೆದೆವು. ಆದರೆ 3 ತಿಂಗಳಿಗೆ ನಮ್ಮನ್ನು ಜೈಲಿನಿಂದ ಬಿಡುಗಡೆ ಮಾಡಿದರು. ಜೈಲಿನಲ್ಲಿ ನಮಗೆ ಯಾರೂ ತೊಂದರೆ ಕೊಡಲಿಲ್ಲ. ಚೆನ್ನಾಗಿಯೇ ನೋಡಿಕೊಂಡರು. 1947ರಲ್ಲಿ ನಾನು ಫಕ್ಕೀರಪ್ಪ ಇಂಗಳಗಿ ಅವರನ್ನು ವಿವಾಹವಾದೆ. ನಮ್ಮ ಯಜಮಾನರು ಏರಫೋರ್ಸನಲ್ಲಿ ಸೇವೆ ಸಲ್ಲಿಸಿದ್ದಾರೆ. 1964ರ ವೇಳೆಯಲ್ಲಿ ನಾವು ಮುಂಡಗೋಡ ತಾಲೂಕಿನ ಬಾಚಣಕಿ ಗ್ರಾಮದಲ್ಲಿ ಯಜಮಾನರು ಬಾಚಣಕಿಯಲ್ಲಿ ಹೊಲ ತೆಗೆದುಕೊಂಡಿದ್ದರಿಂದ ನಾವು ಹೊಲ ಸಾಗುವಳಿ ಮಾಡುತ್ತಾ ಇದ್ದೇವು. ನಮ್ಮ ಯಜಮಾನರು 1980 ರಂದು ತೀರಿಕೊಂಡರ. ನನಗೆ ಇಬ್ಬರು ಮಕ್ಕಳು. ಮಗಳು ಅನುಸೂಯಾ ವೈದ್ಯ ಈಗ ಮಲೇಶಿಯಾದಲ್ಲಿದ್ದಾರೆ. ಮಗ ವಿಜಯಕುಮಾರ ಇಂಜಿನಯರ್ ವ್ಯಾಸಂಗ ಮಾಡಿದ್ದಾನೆ. ಸದ್ಯ ಕೃಷಿ ಮತ್ತು ತೋಟಗಾರಿಕಾ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾನೆ. ಅರೋಗ್ಯದಲ್ಲಿ ಸ್ವಲ್ಪ ಸರಿ ಇಲ್ಲದಕಾರಣ. ಮಗ ಪಟ್ಟಣದ ನಂದೀಶ್ವರ ನಗರದಲ್ಲಿ ಮನೆ ಕಟ್ಟಿ ನನನ್ನು ಇಲ್ಲಿ ಇಟ್ಟುಕೊಂಡಿದ್ದಾನೆ ಎಂದರು.

ಲೀಲಾಬಾಯಿ ಇಂಗಳಗಿ ಅವರಿಗೆ ಪ್ರತಿ ವರ್ಷ ಸ್ವಾತಂತ್ರ್ಯೋತ್ಸವದ ದಿನದಂದು ತಾಲೂಕಡಳಿತದಿಂದ ಸನ್ಮಾನ ಮಾಡುತ್ತದೆ. ಈ ಬಾರಿ ಕ್ವಿಟ್ ಇಂಡಿಯಾ ಚಳುವಳಿ ನೆನಪಿಗಾಗಿ ಹಿರಿಯ ಸ್ವಾತಂತ್ರ್ಯ ಹೋರಟಗಾರರಿಗೆ ಜಿಲ್ಲಾಡಳಿತದಿಂದ ಸನ್ಮಾನಿಸುವ ಆದೇಶ ರಾಜ್ಯ ಸರ್ಕಾರದಿಂದ ಬಂದ ಹಿನ್ನಲೆಯಲ್ಲಿ ಅಗಷ್ಟ 9ರಂದು ಲೀಲಬಾಯಿ ಅವರ ಮನೆಗೆ ತೆರಳಿ ಸನ್ಮಾನಿಸುತ್ತಿದೆ. ಈಗಾಗಲೇ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಲೀಲಾಬಾಯಿಯವರಿಗೆ ಪೆನ್‌ಶನ್ ಬರುತ್ತಿದ್ದು, ಬಸ್ ಮತ್ತು ರೇಲ್ವೆ ಉಚಿತ ಪಾಸ್ ನೀಡಲಾಗಿದೆ.

**ಯುವ ಜನರು ರಾಷ್ಟ್ರ ಪ್ರೇಮ ಬೆಳೆಸಿಕೊಳ್ಳಬೇಕು:** ಇಂದಿನ ಯುವ ಜನಾಂಗದಲ್ಲಿ ನಮ್ಮ ದೇಶದ ಹಿಂದಿನ ಇತಿಹಾಸವಿರಬೇಕು ಜೊತೆಗೆ ಸೇವಾಭಿಮಾನವಿರಬೇಕು. ಯುವಕ, ಯುವತಿಯರು ಧೈರ್ಯದಿಂದ ಇರಬೇಕು. ದೇಶದ ಬಗ್ಗೆ ದೊಡ್ಡ ಅಭಿಮಾನ ಇಟ್ಟುಕೊಳ್ಳಬೇಕು. ರಾಷ್ಟ್ರ ಭಕ್ತಿಯನ್ನು ಬೆಳೆಸಿಕೊಳ್ಳಬೇಕು. ದೇಶವೇ ಮೊದಲು ಎಂಬ ಭಾವನೆ ಇರಬೇಕು. ಬಲಿದಾನ ಮಾಡಿದವರ ಬಗ್ಗೆ ಭಾರತದ ಮಹಾ ಪುರುಷರ ಬಗ್ಗೆ ತಿಳಿದುಕೊಳ್ಳಬೇಕು. ಚಿಕ್ಕ ಮಕ್ಕಳಲ್ಲೂ ಕೂಡ ನಾವು ಈಗಿನಿಂದಲೇ ರಾಷ್ಟ್ರ ಪ್ರೇಮ, ರಾಷ್ಟ್ರ ಭಕ್ತಿ ಭಾವನೆಯನ್ನು ಬೆಳೆಯುವಂತೆ ಮಾಡಬೇಕು ಎಂದು ಲೀಲಾಬಾಯಿ ಇಂಗಳಗಿ ಅವರು ಹೇಳುತ್ತಾರೆ.

# ಧನಾತ್ಮಕ ಚಿಂತನೆಯಿಂದ ಆರೋಗ್ಯ!



– ಡಾ ಸೌಮ್ಯ ಕೆ.ವಿ.
ತಜ್ಞ ವೈದ್ಯರು ತಾಲೂಕು ಆಸ್ಪತ್ರೆ
ಯಲ್ಲಾಪುರ.

ಆರೋಗ್ಯವೆಂಬುದು ಕೇವಲ ದೈಹಿಕ ಸುಸ್ಥಿತಿಯಷ್ಟೇ ಅಲ್ಲ ಮಾನಸಿಕ ಸ್ವಾಸ್ಥ್ಯವೂ ಕೂಡಾ ಎಂದು ವಿಶ್ವ ಆರೋಗ್ಯ ಸಂಸ್ಥೆಯು ನಿರೂಪಿಸಿದೆ. ಈ ನಿಟ್ಟಿನಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕೆಲವು ಅಧ್ಯಯನಗಳು ಧನಾತ್ಮಕ ಚಿಂತನೆ ಮಾಡುವುದರಿಂದ ಹಾಗೂ ಒಳ್ಳೆಯ ಮಾನಸಿಕ ಸಮತೋಲನವನ್ನು ಸಾಧಿಸುವುದರಿಂದ ದೈಹಿಕ ಆರೋಗ್ಯವನ್ನು ಕೂಡಾ ಉತ್ತಮಗೊಳಿಸಬಹುದು ಎಂಬ ಕುರಿತು ಬೆಳಕು ಚೆಲ್ಲಿವೆ.



ಹೃದಯ ಕಾಯಿಲೆಯ ಕೌಟುಂಬಿಕ ಚರಿತ್ರೆ ಇರುವವರ ಮೇಲೆ ಒಂದು ಸಂಶೋಧನೆ ನಡೆದಿತ್ತು. ಇವರಲ್ಲಿ ಕೆಲವರು ಜೀವನದಲ್ಲಿ ಬರುವ ಸಮಸ್ಯೆಗಳನ್ನು ಧನಾತ್ಮಕ ಧೋರಣೆಯಿಂದ ಎದುರಿಸುವವರಾದರೆ ಇನ್ನು ಕೆಲವರು ಎಲ್ಲವನ್ನೂ ಋಣಾತ್ಮಕ ಭಾವದಿಂದ ಕಾಣುವವರಾಗಿದ್ದರು. ಅಧ್ಯಯನದಿಂದ ತಿಳಿದುಬಂದಿದ್ದೆಂದರೆ ಧನಾತ್ಮಕ ಚಿಂತನೆ ನಡೆಸುವವರಲ್ಲಿ ಹೃದಯಾಘಾತದ ಸಾಧ್ಯತೆ ಮೂರನೆಯ ಒಂದು ಭಾಗದಷ್ಟು ಕಡಿಮೆಯಾಗಿತ್ತು.

ಧನಾತ್ಮಕ ಚಿಂತನೆಯಿಂದ ವ್ಯಕ್ತಿ ಉತ್ಸಾಹ, ಸಂತೃಪ್ತಿ, ನಿರಾತಂಕ ಹಾಗೂ ಶಕ್ತಿಭರಿತನಾಗಿರುವುದು ಸಾಧ್ಯವಾಗುತ್ತದೆ. ಒತ್ತಡವೆಂಬುದು ಜೀವಕೋಶಗಳ ಮಟ್ಟದಲ್ಲಿ ಋಣಾತ್ಮಕ ಪ್ರಭಾವವನ್ನು ಉಂಟುಮಾಡುತ್ತದೆ. ಆದರೆ ಆಶಾದಾಯಕನಾಗಿ ಹಾಗೂ ಧನಾತ್ಮಕವಾಗಿ ಯೋಚಿಸುವ ವ್ಯಕ್ತಿಯು ಉತ್ತಮ ಜೀವನಶೈಲಿಯನ್ನು ರೂಪಿಸಿಕೊಳ್ಳಬಲ್ಲ. ಸರಿಯಾದ ನಿರ್ಣಯಗಳನ್ನು ತೆಗೆದುಕೊಳ್ಳಬಲ್ಲ. ಮುಂದಿನ ಬದುಕಿನ ಗುರಿಗಳ ಬಗ್ಗೆ ಯೋಚಿಸಬಲ್ಲ. ವ್ಯತಿರಿಕ್ತವಾಗಿ ಋಣಾತ್ಮಕತೆಯು ನಮ್ಮ ರೋಗನಿರೋಧಕ ಶಕ್ತಿಯನ್ನು ದುರ್ಬಲಗೊಳಿಸುತ್ತದೆ.

ನೀವೊಂದು ಚಿಕ್ಕ ಕಥೆ ಕೇಳಿರಬಹುದು. ಆಶ್ರಮದಲ್ಲಿ ಶಿಷ್ಯ ಗುರುಗಳ ಮುಂದೆ ಬಿನ್ನವಿಸಿಕೊಳ್ಳುತ್ತಾನೆ: ಭಕ್ತನೊಬ್ಬ ಆಶ್ರಮಕ್ಕೆ ಹಸುವನ್ನು ದಾನವಾಗಿ ನೀಡಿದ್ದಾನೆಂದು. ಗುರುಗಳು ಹಸನ್ಮುಖರಾಗಿ ಉತ್ತರಿಸಿದರಂತೆ: ಒಳ್ಳೆಯದಾಯಿತು; ಹಾಲು ಮೊಸರು ಕೊರತೆಯಿಲ್ಲ. ಕೆಲವು ದಿನಗಳ ಬಳಿಕ ಶಿಷ್ಯ ಗುರುಗಳಲ್ಲಿ ನಿವೇದಿಸಿದ: ಭಕ್ತ ತನ್ನ ಹಸುವನ್ನು ವಾಪಸ್ ಒಯ್ಯುತ್ತಿದ್ದಾನೆ; ಗುರುಗಳು ಹಸನ್ಮುಖರಾಗಿ ಉತ್ತರಿಸಿದರಂತೆ : ಒಳ್ಳೆಯದಾಯಿತು; ಸಗಣಿ ಎತ್ತುವ ಕೆಲಸ ಕಡಿಮೆಯಾಯ್ತಲ್ಲ..

ಪ್ರತಿಯೊಂದು ಸನ್ನಿವೇಶದಲ್ಲೂ ಒಳಿತನ್ನು ಕಾಣುವ ಈ ಧನಾತ್ಮಕ ಮನಸ್ಸು ನಮಗಿದ್ದರೆ ನಿರಾಳತೆ ನಿರಮ್ಮಳತೆ ಸಾಧ್ಯ. ಇಂದು ಪ್ರತಿಯೊಬ್ಬರಲ್ಲೂ ಬಿಪಿ, ಶುಗರ್, ಹೃದಯ ಸಮಸ್ಯೆಗಳು, ಥೈರಾಯಿಡ್ ಸಮಸ್ಯೆ ಹೆಚ್ಚುತ್ತಿರುವುದನ್ನು ಕಾಣುತ್ತಿದ್ದೇವೆ. ಇರುವ– ಇಲ್ಲದ ಸಮಸ್ಯೆಗಳನ್ನೆಲ್ಲ ತಲೆಯ ಮೇಲೆ ಹೇರಿಕೊಂಡು ಚಿಕ್ಕಪುಟ್ಟದಕ್ಕೂ ಆಕಾಶ ತಲೆಯ ಮೇಲೆ ಬಿದ್ದಂತಾಡುವುದು ಕೆಲವರಿಗೆ ಅಭ್ಯಾಸವಾಗಿ ಬಿಟ್ಟಿರುತ್ತದೆ. ಆದದ್ದೆಲ್ಲ ಒಳಿತೇ ಆಯಿತು ಎಂಬ ಭಾವ ಬೆಳೆಸಿಕೊಳ್ಳಬೇಕಿದೆ.

**ಕೆಲವರಿಗೆ ಪ್ರಕೃತಿದತ್ತವಾಗಿ ಈ ಧನಾತ್ಮಕ ಸ್ವಭಾವ ದೊರೆತಿರುತ್ತದೆ.**
**ಆದರೆ ಪ್ರಯತ್ನಪೂರ್ವಕವಾಗಿ ಧನಾತ್ಮಕತೆಯನ್ನು ರೂಢಿಸಿಕೊಳ್ಳಲು ಹೀಗೆ ಮಾಡೋಣ**

- **ಹಸನ್ಮುಖಿಗಳಾಗಿ**
  ಹೆಚ್ಚು ನಗುವುದು ದೇಹದ ಸ್ನಾಯುಗಳನ್ನು ಸಡಿಲಗೊಳಿಸುತ್ತದೆ. ಹಾರ್ಮೋನುಗಳನ್ನು ತಹಬಂದಿಗೆ ತರುತ್ತದೆ. ನಿತ್ಯ ಜೀವನದಲ್ಲಿ ಹಾಸ್ಯಚಟಾಕಿಗಳಿರಲಿ. ನಿತ್ಯ ಹತ್ತು ನಿಮಿಷವಾದರೂ ಹಾಸ್ಯಭರಿತ ವಿಡಿಯೋ ವೀಕ್ಷಿಸಿ.

- **ವಾಸ್ತವವನ್ನು ಒಪ್ಪಿಕೊಳ್ಳಿ**
  ಬದಲಾವಣೆಯೆಂಬುದು ಜಗದ ನಿಯಮ. ಯಾವುದೂ ಇದ್ದಂತೆಯೇ ಇರಲಾಗದು. ಹೀಗಾಗಿ ಬಂದದ್ದನ್ನು ಸ್ವೀಕರಿಸುವ ನಿರ್ಮಲ ಮನಸ್ಸಿರಲಿ.

- **ಚಿಕ್ಕಪುಟ್ಟದಕ್ಕೆ ಕೊರಗದಿರಿ**
  ಉದಾಹರಣೆಗೆ 'ಅಯ್ಯೋ ಮಳೆ ಬೇಜಾರು' 'ಅಯ್ಯೋ ಟ್ರಾಫಿಕ್ ಜ್ಯಾಮ್. ಕಾಯಬೇಕಲ್ಲ.' 'ಅಯ್ಯೋ ಕರೆಂಟಿಲ್ಲ' ' ಅಯ್ಯೋ ದಿನಾ ನೌಕರಿಗೆ ಹೋಗಲು ಎರಡು ತಾಸು ಪ್ರಯಾಣ ಮಾಡಬೇಕು' ಇತ್ಯಾದಿ. ಪರ್ಯಾಯವಾಗಿ ಏನು ಮಾಡಬಹುದೆಂದು ಯೋಚಿಸಿ. ಉದಾಹರಣೆಗೆ ಟ್ರಾಫಿಕ್ಕಿನಲ್ಲಿ ಕಾಯುತ್ತಲೋ, ಬಸ್ಸಿನಲ್ಲಿ ಪ್ರಯಾಣ ಮಾಡುತ್ತಲೋ ನಿಮಗಿಷ್ಟದ ಸಂಗೀತವನ್ನೋ ಚಿಂತನಮಾಲಿಕೆಯನ್ನೋ ಕೇಳಬಹುದು. ಧನಾತ್ಮಕ ಭಾವವನ್ನು ಹೆಚ್ಚಿಸುವ ಅನೇಕ ಪ್ರವಚನಗಳು ಯುಟ್ಯೂಬಿನಲ್ಲಿ ಲಭ್ಯವಿವೆ.

- ಕುಟುಂಬದ ಸದಸ್ಯರೊಂದಿಗೆ, ಹಳೆಯ ಸ್ನೇಹಿತರೊಂದಿಗೆ ಸಮಯ ಕಳೆಯುವುದು ದೇಹಕ್ಕೆ ಮನಸ್ಸಿಗೆ ಟಾನಿಕ್ ಕುಡಿದಂತೆ!
- ಸಮಸ್ಯೆಗಳು ಮನುಷ್ಯನ ಜೀವನದಲ್ಲಿ ಸಹಜ; ಚಿಂತಿಸುತ್ತ ಕುಳಿತುಕೊಂಡರೇನು ಫಲ? ಪರಿಹಾರದತ್ತ ಪ್ರಯತ್ನಿಸಿ..
- ಚಿಕ್ಕ ತಲೆನೋವು ಬಂದರೂ ಮಿದುಳಿನ ಕ್ಯಾನ್ಸರ್ ಇದ್ದೀತೆಂದು ಕಂಗಾಲಾಗುವುದು ಋಣಾತ್ಮಕತೆ. ಸರಿಯಾದ ಮಾಹಿತಿ, ಮಾರ್ಗದರ್ಶನ, ತಪಾಸಣೆಯಿಂದ ಪರಿಹಾರವಾಗುತ್ತದೆ ಎಂಬುದು ಧನಾತ್ಮಕತೆ. ಆಯ್ಕೆ ನಮ್ಮದೇ!

# ನಮ್ಮೂರ ಪ್ರವಾಸಿತಾಣ

# ಜೇನುಕಲ್ಲು ಗುಡ್ಡ

ಅತ್ಯಂತ ಸುಂದರ ಪ್ರದೇಶಗಳಲ್ಲಿ ಜೇನುಕಲ್ಲು ಗುಡ್ಡವು ಒಂದಾಗಿದ್ದು, ಮೂರು ಕಾಲಗಳಲ್ಲಿಯೂ ಪ್ರವಾಸಿಗರ ಕಣ್ಮನ ಸೆಳೆಯುತ್ತಿದೆ. ಪ್ರತಿ ವರ್ಷವೂ ಈ ಸುಂದರ ತಾಣವನ್ನು ವೀಕ್ಷಿಸಲು ಸಾವಿರಾರು ಸಂಖ್ಯೆಯಲ್ಲಿ ಪ್ರವಾಸಿಗರು ಬೇಟಿನೀಡುತ್ತಾರೆ. ತಾಲೂಕು ಕೇಂದ್ರ ಯಲ್ಲಾಪುರ ದಿಂದ 17 ಕಿ.ಮೀ ದೂರದ ದಟ್ಟ ಕಾನನದ ನಡುವೆ ಇರುವುದೇ ಜೇನುಕಲ್ಲು ಗುಡ್ಡ.

ಪಶ್ಚಿಮ ಘಟ್ಟಗಳ ಮಡಿಲಿನಲ್ಲಿ ಇರುವ ಸುಂದರ ತಾಣಗಳಲ್ಲಿ ಇದು ಒಂದಾಗಿದೆ. ಜೇನುಹುಳುಗಳಿಗೆ ಪೂರಕ ವಾತಾವರಣ ಇರುವುದರಿಂದ ಅಪಾರ ಪ್ರಮಾಣದ ಜೇನು ಗೂಡುಗಳು ಕಾಣಸಿಗುತ್ತವೆ ಅದಕ್ಕೆ ಜೇನುಕಲ್ಲು ಗುಡ್ಡ ಎಂದು ಕರೆಯುತ್ತಾರೆ ಎಂಬ ಪ್ರತೀತಿ ಇದೆ. ಅಲ್ಲಿಗೆ ತಲುಪಿದಾಗ ಮನಸ್ಸಿನ ಬೇಸರವೆಲ್ಲ ಕಳೆದು ಹೋಗುವುದಂತು ನಿಜ.



ಗುಡ್ಡದ ತುದಿಯಲ್ಲಿ ನಿಂತು ಸುತ್ತಲಿನ ಪ್ರದೇಶವನ್ನು ನೋಡಿದಾಗ ಗುಡ್ಡಗಳು ಒಂದರ ಮೇಲೊಂದರಂತೆ ಹಾಸಿಕೊಂಡಂತೆ ಗೋಚರವಾಗುತ್ತದೆ. ಗುಡ್ಡಗಳನ್ನು ಆಗಾಗ ಮುತ್ತಿಕ್ಕುವ ಮಂಜಿನ ಹೊದಿಕೆಗಳು ಗುಡ್ಡವನ್ನು ಅದೃಶ್ಯ ಗೊಳಿಸುತ್ತದೆ ಕೆಲವೊಮ್ಮೆ ಮಂಜಿನ ಹೊದಿಕೆ ಸರಿದು ಗುಡ್ಡ ಗೋಚರಿಸುತ್ತದೆ.

ಮಲೆನಾಡಿನಲ್ಲಿ ನಿರಂತರ ಮಳೆಯಿಂದ ಪ್ರಕೃತಿ ಮಾತೆ ಹಚ್ಚ ಹಸಿರಿನಿಂದ ಕಂಗೊಳಿಸುವ ಜೊತೆಗೆ ಹಸಿರು ಬಣ್ಣದ ಸೀರೆ ಉಟ್ಟಂತೆತೋರುತ್ತದೆ. ಉತ್ತಮ ವಾತಾವರಣ ಸೃಷ್ಟಿಯಾಗಿದೆ ಪ್ರವಾಸಿಗರು ನೈಸರ್ಗಿಕ ಸೌಂದರ್ಯ ಸವಿಯಲು ಎರಡು ಕಣ್ಣುಗಳು ಸಾಲದು. ತಂಪಾದ ಹವಾಮಾನ ಪ್ರವಾಸಿಗರ ಹೊರ ಜಗತ್ತಿನ ನೋವನ್ನು ಮರೆಸುವ ಜೊತೆಗೆ ಶುದ್ಧ ವಾತಾವರಣ ಒದಗಿಸುತ್ತದೆ.





